★★★

ಭಾನುವಾರ ಹುಡುಗಿ ಗೆಳತಿಯರೊಂದಿಗೆ ಕೋಟೆಗೆ ಹೋದದ್ದು ಕೇಳಿ ತಾನೂ ಓಡಿದ. ಇವನನ್ನು ಕಂಡೊಡನೆ ಜೊತೆಗಿದ್ದ ಗೆಳತಿಯರನ್ನು ಕೊಸರಿಕೊಂಡು ಇವನ ಬಳಿ ಹಾಜರಾದಳು. ಹುಡುಗ ಏಕನಾಥೇಶ್ವರಿ ಆಲಯದ ಹಿಂಭಾಗದ ಬಂಡೆಗಳತ್ತ ಕರೆದೊಯ್ಯುವಾಗ ಅವಳ ಕಣ್ಣಿಗೆ ಅವನು ರಣಬೀರ್‌ನೋ ರಣವೀರ್ ಸಿಂಗ್ ತರಹವೋ ಕಂಡ. ನೋಡುತ್ತಾ ನಿಂತಳು. ಇವನೋ ನಾಚಿ ನೀರಾದ. ದೇವರಿಗೆಂದು ತಂದಿದ್ದ ಹೂವನ್ನು ಅವಳ ಕೈಗಿಡಲು ಹೋದ. 'ಯಾರಾದ್ರೂ ಕೈಲಿಡ್ತಾರಾ? ಅಷ್ಟೂ ತಿಳಿಯೋಲ್ವಾ?' ಹುಡುಗಿ ಮುನಿದಳು. ಅವನಿಗೋ ದೇಹದಾದ್ಯಂತ ನಡುಕ. ಅವನ ಅವಸ್ಥೆ ನೋಡಿ ಅವಳೇ ಕರಪಿಡಿದು ಮುಡಿಸಿಕೊಂಡಳು. ಅವನ ಕರಗಳನ್ನು ಕಣ್ಣೊತ್ತಿಕೊಂಡಳು. ಪಿಳಿಪಿಳಿಸಿ ತೇಲುಗಣ್ಣಾದ. 'ಇವು ಶಾರದೆಯ ಕೈಗಳು' ಅಂತ ಲೊಚಕ್ಕನೆ ಮುದ್ದಿಟ್ಟು ತಟ್ಟನೆ ಎದೆಗೊತ್ತಿಕೊಂಡಳು. ಮೃದವಾದ ಜಾಗಕ್ಕೆ ಕೈಗಳು ಸೋಕುತ್ತಲೇ ಸ್ಟ್ರೋಕ್ ಹೊಡೆದವನಂತಾಗಿ ಕುಸಿದ ಅವನನ್ನು ಅವಳೇ ಅಪ್ಪಿ ಹಿಡಿದಳು. ಬಳಸಿಕೊಂಡಳು. ಉನ್ಮಾದದಲ್ಲಿ ಮುತ್ತಿನ ಮಳೆಗರೆದಳು. 'ಐ ಲವ್ ಯು' ಎಂದ ಪಾಪದ ಹುಡುಗ ಬಡಬಡಿಸಿದ. 'ಅದನ್ನು ಬಾಯಿಬಿಟ್ಟು ಬೇರೆ ಹೇಳಬೇಕೆ' ಎಂದಾಕೆ ಕಿಲಕಿಲನೆ ನಕ್ಕಳು. 'ನಿಮ್ಮ ನಗು ಶುಭ ಪಂತುವರಾಳಿ' ಅಂದ. ಕೊಸರಿಕೊಂಡು ಹೊರಟೇ ಬಿಟ್ಟಳು. 'ನಿಮ್ಮ ನಡಿಗೆ ಸುನಾದ ವಿನೋದಿನಿರಾಗದ ಥರಾ ಸ್ಟೈಲಿಶ್' ಅಂದ. ಅವಳು ಮೆಟ್ಟಿಲುಗಳನ್ನು ನೆಗೆದು ಓಡುವುದನ್ನೇ ನೋಡುತ್ತಾ 'ಇವಳೊಂದು ದೇವ ಮನೋಹರಿರಾಗ'ವೆಂದು ನಿಡುಸುಯ್ದ. ಚುಂಬನದ ರುಚಿ, ಅಪ್ಪುಗೆಯ ಸುಖದ ಬೆನ್ನತ್ತಿ ಮೈಚಳಿಬಿಟ್ಟು ದಿನಗಳೆದಂತೆ ಕೋಟೆ ಕೊತ್ತಲ, ಚಂದ್ರವಳ್ಳಿ, ಅಂಕಳಿಗುಹೆ ರೌಂಡ್ಸ್ ಹೊಡೆದರು. 'ಲಂಗ ಬ್ಲೌಸೂ ಬೇಡಾರೀ, ಸ್ಯಾರಿ ಉಟ್ಟು ಬನ್ನಿ ಪ್ಲೀಸ್' ಅಂದ ಹುಡುಗ. ಈ ಉಡುಪು ಪ್ರೇಮ ಮಾಡಲು ಅಡ್ಡಿಯೆನ್ನಿಸಿದಾಗ ಅವನ ಬೇಡಿಕೆ ಈಡೇರಿಸಿದಳು. ಹೆದರುವ ಹುಡಗನನ್ನು ಅನಾಮತ್ತು ತಬ್ಬಿ ಶೃಂಗಾರ ಪಾಠ ಕಲಿಸಿದಳು. ಆದರೂ ಅವಳ ಸನಿಹದಲ್ಲೂ ಹುಡುಗ ಸಂಗೀತ ಮರೆತವನಲ್ಲ. 'ಪಲ್ಲವಿ ಅಂದರೆ ತುಟಿ, ಅನು ಪಲ್ಲವಿ ಕುಚಗಳು, ಚರಣವೆಂದರೆ ನಾಭಿ, ಅದರ ಕೆಳಗಿಳಿದರೆ ಚಿಟ್ಟೆ ಸ್ವರ' ಅಂತೆಲ್ಲಾ ಸಂಕೇತಗಳಿಂದ ಮಾತನಾಡಿದ.

ಹುಡುಗಿ ಬಿ.ಎಸ್‌ಸಿ.ಯನ್ನು ಫಸ್ಟ್ ಕ್ಲಾಸಲ್ಲಿ ಪಾಸ್ ಮಾಡಿದಾಗ ತಾನೇ ಪಾಸಾದಷ್ಟು ಸಂಭ್ರಮಿಸಿ, ಕಾಂತಿ ಸ್ವೀಟ್ಸ್ ಸ್ಟಾಲ್‌ನ ಸಿಹಿಯನ್ನೆಲ್ಲಾ ತಂದು ಅವಳ ಮನೆಗೆ ಹೋಗಿ ಅರ್ಪಿಸಿ, ಅವರಪ್ಪ ಅಮ್ಮನನ್ನು ಖುಷಿ ಪಡಿಸಿದ. ಅವಳ ತಾಯಿ ಇವನಿಗೆ ಪುಳಿಯೋಗರೆ, ಪಾನಕ ಕೊಟ್ಟರು. 'ನಿಮ್ಮನ್ನು ಕಂಡರೆ ನಮ್ಮ ಹುಡುಗಿಗೆ ಭಾಳ ಪ್ರೀತಿ' ಅಂದರು. ಇವನು ಅವಳತ್ತ ನೋಡಿದ, ನಿಮ್ಮ ತಾಯಿಗೆ ಹೇಗೆ ಗೊತ್ತಾಯ್ತು ಅನ್ನೋ ರೀತಿ. ಮನೆಗೆ ಬರೋ ಹುಡುಗರಿಗೆಲ್ಲಾ ತಿಂಡಿ ಕಾಫಿ ಕೊಟ್ಟು ಆಕೆ ಹಾಗೇ ಹೇಳೋದು ಅಂತ ಅವಳಾದರೂ ಹೇಗೆ ಹೇಳಿಯಾಳು. ಕಣ್ಣು ಮಿಟುಕಿಸಿ ಸುಮ್ಮನಿರಿಸಿದಳು. ಇವಳನ್ನು ಮದುವೆಯಾಗಲು ಇವಳ ತಾಯಿಯದಂತೂ ತಕರಾರಿಲ್ಲವೆನ್ನಿಸಿ ಹಗುರಾದ. ಇನ್ನವಳ ತಂದೆ ಹೆಂಡತಿ ಗುಲಾಮನೆಂಬುದು ವಠಾರಕ್ಕೆಲ್ಲಾ ಓಪನ್ ಸಿಕ್ರೆಟ್. ಅಲ್ಲಿಗೆ ಲೈನ್ ಕ್ಲಿಯರ್ ಅಂದುಕೊಂಡರೂ ಜಾತಿಯ ಲಯನ್‌ನ ಭಯವಂತೂ ಇದ್ದೇ ಇತ್ತು. ಮದುವೆ ಬಗ್ಗೆ ಪ್ರಪೋಸ್ ಮಾಡಲು ಧೈರ್ಯದ್ದೇ ಕೊರತೆ. ಧೈರ್ಯಕ್ಕೆನಾದ್ರೂ ಟ್ಯಾಬ್ಲೆಟ್ ಉಂಟೆ ಎಂದು ಅಣ್ಣಪ್ಪನ ಮೆಡಿಕಲ್ ಸ್ಟೋರ್‌ಗೆ ಹೋಗಿ ವಿಚಾರಿಸಿ ಕಾಮಿಡಿ ಪೀಸ್ ಆದ. ಒಂದು ದಿನ ಬಂದವಳೇ, 'ಒಂದು ವಾರ ಆದವಾನಿಗೆ ಹೋಗುತ್ತೇನೆ ಸರ್' ಅಂದಳು. 'ಯಾಕೆ?' ಉಗುಳು ನುಂಗಿದ. ಹೋಗಬೇಡವೆಂದು ಗೋಗರೆದ. 'ಅಮ್ಮನ ಜೊತೆ ಹೋಗದಿದ್ದರೆ ಸಿಟ್ಟು ಮಾಡ್ಕೋತಾಳೇ ರೀ. ಸಿಟ್ಟಾದಳೋ ಸಂಗೀತಕ್ಕೆ ಹೋಗ್ಬೇಡ ಅಂದ್ರೂ ಅಂದ್ಲೈ' ಅಂದಾಗ ನಡುಗಿ ಹೋದ ಹುಡುಗ